# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 424/2022

ಸಾಕ್ಷಿಗೆ ದಿನಾಂಕ 05-12-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 4

| | | |
|---|---|---|
| ಹೆಸರು | ಃ | ಶ್ರೀಮತಿ ರೇಖಾ ಯಡ್ರಮ್ಮನಹಳ್ಳಿ |
| ಗಂಡನ ಹೆಸರು | ಃ | ನಾಗಪ್ಪ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ನೆಲ್ಲುಕುದುರಿ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಮಸಾಲಿ ನೆಲ್ಲುಕುದುರಿ ಗ್ರಾಮದಲ್ಲಿ ಸರ್ವೆ ನಂ. 392 ಒಟ್ಟು ಕ್ಷೇತ್ರ 5 ಎಕರೆ ಜಮೀನಿದ್ದು ಅದರಲ್ಲಿ ನಮಗೆ 3 ಎಕರೆ ಜಮೀನಿದ್ದು ನಾವು ಅದರಲ್ಲಿ ವ್ಯವಸಾಯ ಮಾಡಿ ಜೀವನ ಸಾಗಿಸುತ್ತೇವೆ. ಸದರಿ ಜಮೀನು ನಮ್ಮ ಅತ್ತೆಯ ಹೆಸರಿನಲ್ಲಿದ್ದು ನಾವು ಮತ್ತು ಆರೋಪಿತರು ಭಾಗ ಮಾಡಿಕೊಂಡಿದ್ದು ಅದರಲಿಲ ನಮಗೆ 3 ಎಕರೆ ಜಮೀನು ಮತ್ತು ಆರೋಪಿತರಿಗೆ 2 ಎಕರೆ ಜಮೀನು ಬಂದಿರುತ್ತದೆ. ದಿಃ31-03-2022 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆವು. ನಮ್ಮ ಜಮೀನಿನಲ್ಲಿ ಶೇಂಗಾ ಬಣವಿ ಇತ್ತು. 1ನೇ ಆರೋಪಿತನು ನಮ್ಮ ಜಮೀನಿನಲ್ಲಿ ನೀರು ಬಿಡಲು ಬಂದ. ಆಗ ನನ್ನ ಗಂಡ ಸದರಿ ಜಮೀನಿನಲ್ಲಿ ನೀರು ಏಕೆ ಬಿಡುತ್ತೀಯಾ ಅಂತಾ 1ನೇ ಆರೋಪಿಗೆ ಕೇಳಿದರು. ಆಗ 1ನೇ ಆರೋಪಿತನು ನನ್ನ ಗಂಡನಿಗೆ ಏ ಸೂಳೆಮಗನೇ ಏನು ಕೇಳುತ್ತೀಯಾ ನಿಂದು ಬಹಳವಾಗಿದೆ ಅಂತಾ ಹೇಳಿ ನನ್ನ ಗಂಡನ ಸೊಂಟಕ್ಕೆ ಒದ್ದಿರುತ್ತಾನೆ. 3ನೇ ಆರೋಪಿತಳು ಬಂದು ನನ್ನ ಗಂಡನ ಗುಪ್ತಾಂಗಕ್ಕೆ ಕೈಹಾಕಿರುತ್ತಾಳೆ. 2ನೇ ಆರೋಪಿತನು ಕಟ್ಟಿಗೆಯಿಂದ ನನ್ನ ಗಂಡನಿಗೆ ಹೊಡೆದಿರುತ್ತಾನೆ. 4ನೇ ಆರೋಪಿತನು ಬಂದು ರಂಡೆ ಸೂಳೆ ಅಂತಾ ಬೈದು ನನಗೆ ಬಹಳ ಕಿರುಕುಳ ಕೊಟ್ಟಿರುತ್ತಾನೆ. ಅವರು ನಮಗೆ ಹೊಡೆದು ಎಳೆದಾಡಿ ಕೆಟ್ಟ ಭಾಷ್ಷೆಯಿಂದ ಬೈದಾಡಿ ಜೀವಸಹಿತ ಬಿಡುವುದಿಲ್ಲ ಅಂತಾ ನಮಗೆ ಜೀವಬೆದರಿಕೆ ಹಾಕಿದರು. ಆಗ ಚಾಸಾ-5, 6, 2, 3 ರವರು ಬಂದು ಏನಾದರೂ ಸರಿ ಮಾಡುವ ಅಂತಾ ಹೇಳಿದರು. ಅವರು ಜಗಳವನ್ನು ಸಹಾ ಬಿಡಿಸಿದರು. ಗಾಯದ ಕುರಿತು ನಾವು ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇವೆ. ಹಿರಿಯರು ಪಂಚಾಯ್ತಿಗೆ ಕರೆದರೂ ಆರೋಪಿತರು ಬರಲಿಲ್ಲ. 2ನೇ ತಾರೀಖಿನಂದು ನಾವು ಪೋಲೀಸ್

ಠಾಣೆಗೆ ಹೋಗಿ ದೂರು ನೀಡಿರುತ್ತೇವೆ ಮತ್ತು ಘಟನೆಯ ಕುರಿತು ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇವೆ. ಆರೋಪಿತರನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ವ್ಯಕ್ತಿ 4 ನೇ ಆರೋಪಿಯಾಗಿರುತ್ತಾನೆ. ಉಳಿದ ಆರೋಪಿತರ ಗುರುತಿಸುವಿಕೆಗಾಗಿ ತಕರಾರು ಇಲ್ಲ ಅಂತಾ ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು ಮಾ-1 ರಿಂದಲೇ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ.

ಪಾಟೀ ಸವಾಲು. ಆರೋಪಿತರ ಪರ ವಕೀಲರಿಂದಃ-

ಚಾಸಾ-5 ನನ್ನ ಚಿಗವ್ವನ ಗಂಡ. ಚಾಸಾ-6 ನನ್ನ ಕುಲಸ್ಥರು. ಚಾಸಾ-7 ನನ್ನ ಅಣ್ಣ. ಗಲಾಟೆಯಾಗುವ ಸಮಯದಲ್ಲಿ ಚಾಸಾ-6, 5, 3, 2 ರವರು ಇದ್ದರು. ಜಗಳವಾಗುವ ಸಮಯದಲ್ಲಿ ಅವರು ಬಂದು ಜಗಳ ಬಿಡಿಸಿದರು. ಅವರಿಗೆ ಜಗಳದ ವಿಚಾರ ಯಾರು ಹೇಳಿದ್ದರೋ ಗೋತ್ತಿಲ್ಲ ಅವರು ಅದನ್ನು ಕೇಳಿಕೊಂಡು ಅಲ್ಲಿಗೆ ಬಂದಿದ್ದರು. ನಮ್ಮ ಊರಿಗೂ ಮತ್ತು ಹೊಲಕ್ಕೆ 1 ಕಿ ಮಿಾ ಕ್ಕಿಂತ ಕಡಿಮೆ ಅಂತರ ಇದೆ. ನಮ್ಮ ಜಮೀನಿನ ಅಕ್ಕಪಕ್ಕ ಚಾಸಾ-2, 3, 5, 6 ರವರ ಜಮೀನುಗಳು ಅಥವಾ ಮನೆಗಳು ಇರುವುದಿಲ್ಲ. ಮುದುಕಮ್ಮ ಇವರ ಹೆಸರಿನಲ್ಲಿ ಸದರಿ 5 ಎಕರೆ ಜಮೀನು ಇದೆ. ಆರೋಪಿತರು ಸದರಿ ಜಮೀನು ಕುರಿತು ಭಾಗ ಮಾಡಿಕೊಂಡು ಪಹಣಿಗಳನ್ನು ಮಾಡಿಕೊಳ್ಳೊಣ ಅಂತಾ ನಮಗೆ ಸಾಕಷ್ಟು ಸಾರಿ ಕೇಳಿರುತ್ತಾರೆಂದರೆ ಸರಿ. ಸದರಿ ಪಹಣಿಗಳನ್ನು ಮಾಡಿಕೊಳ್ಳುವ ಕುರಿತು 4 ನೇ ಆರೋಪಿತನು ನಮ್ಮ ಬಳಿ ಬಂದು ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡು ಹೋಗುತ್ತಿದ್ದನು ಎಂದರೆ ಸರಿ. ಜಮೀನಿನಲ್ಲಿ ನಮಗೂ ಸಮನಾದ ಪಾಲು ಮಾಡಿಕೊಡಿ ಅಂತಾ ಆರೋಪಿತರು ನಮಗೆ ಕೇಳಿಕೊಂಡರೆಂದರೆ ಸರಿ. ಸಮನಾಗಿ ಪಾಲನ್ನು ಮಾಡಿಕೊಳ್ಳಲು ನಾವು ಒಪ್ಪಲಿಲ್ಲವೆಂದರೆ ಸರಿ. ಅವರಿಗೆ ತೊಂದರೆ ಕೊಡಲು ನಾವು ಸುಳ್ಳು ಕೇಸನ್ನು ದಾಖಲಿಸಿರುತ್ತೇವೆಂದರೆ ಸರಿಯಲ್ಲ.

1 ನೇ ಆರೋಪಿತನು ನನ್ನ ಗಂಡನ ಅಣ್ಣನ ಮಗ ಇರುತ್ತಾನೆ. 3 ನೇ ಆರೋಪಿತಳು 1 ನೇ ಆರೋಪಿಯ ಹೆಂಡತಿ ಎಂದರೆ ಸರಿ. ಉಳಿದ ಆರೋಪಿತರು ಸಂಬಂಧದಿಂದ ನನಗೆ ಮೊಮ್ಮಕ್ಕಳು ಆಗುತ್ತಾರೆಂದರೆ ಸರಿ. ಆರೋಪಿತರು ನಮಗೆ ಯಾವುದೇ ರೀತಿಯಿಂದ ತೊಂದರೆ ಕೊಟ್ಟಿಲ್ಲ, ನಮ್ಮ ಮತ್ತು ಆರೋಪಿತರ ನಡುವೆ ಜಮೀನು ಕುರಿತು ತಕರಾರು ಇರುವುದರಿಂದ ಅವರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು ಮಾ-1 ಇದು ನಮ್ಮ ಹೊಲದಲ್ಲಿ ಬಣವೆ ಹತ್ತಿರ ಇತ್ತು ಅದನ್ನು

ಇಲ್ಲಿ ಯಾರು ತಂದಿದ್ದಾರೆಂದು ನನಗೆ ಗೊತ್ತಿಲ್ಲ. ಮು ಮಾ-1 ರಂತಹ ವಸ್ತು ಜಮೀನುಗಳಲ್ಲಿ ಸಾಕಷ್ಟು ಸಿಗುತ್ತವೆಂದರೆ ಸರಿ. ನಮ್ಮ ಮತ್ತು ಆರೋಪಿತರ ನಡುವೆ ನಾನು ಹೇಳುವ ಹಾಗೆ ಯಾವುದೇ ಗಲಾಟೆಯಾಗಿಲ್ಲ ಅವರು ನನಗೆ ಮತ್ತು ನನ್ನ ಗಂಡನಿಗೆ ಯಾವುದೇ ರೀತಿಯಿಂದ ಹೊಡೆಬಡಿ ಮಾಡಿಲ್ಲ, ರಕ್ತಗಾಯಪಡಿಸಿಲ್ಲ, ಅವಾಚ್ಯವಾಗಿ ಬೈದಿಲ್ಲ ಮತ್ತು ಜೀವಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಜಮೀನು ಕುರಿತು ತಂಟೆ ಇರುವುದರಿಂದ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ನಾನು ಪೋಲಿಸರ ಮುಂದೆ 3 ನೇ ತಿಂಗಳ 2 ನೇ ತಾರೀಖಿನಂದು ಹೇಳಿಕೆ ನೀಡಿರುತ್ತೇನೆ ಯಾವ ವರ್ಷ ಹೇಳಿಕೆ ನೀಡಿರುತ್ತೇನೆಂದು ನನಗೆ ಹೇಳಲು ಬರುವುದಿಲ್ಲ. ಆರೋಪಿತರಿಗೂ ಜಮೀನಿನಲ್ಲಿ ಸಮನಾದ ಪಾಲು ಇದ್ದು ಅದನ್ನು ಅವರಿಗೆ ಕೊಡಬೇಕಾಗುತ್ತದಂತಾ ಹೇಳಿ ನಾನು ಮತ್ತು ನನ್ನ ಗಂಡ ಅವರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ